ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 50. ತಾರೀಖು 19ನೇ ಏಪ್ರೆಲ್ 1884.

ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮಾಜಿ ಅರಕಲ್‌ಗೂಡು ತಾಲ್ಲೂಕಿನ ಭಾಗವಾಗಿದ್ದು ಈಚಿಗೆ ಮೈಸೂರು ಡಿಸ್ಟ್ರಿಕ್ಟಿನ ಯಡತೊರೆ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುವ 78 ಸರಕಾರೀ ಗ್ರಾಮಗಳ ರಿವಿನ್ಯೂ ಸರ್ವೆ ಜಮಾಬಂದಿಯು, 1884ನೇ ಇಸವಿ ಮೇ ಗುರ್ಯಿಗೆ, ಯಾ ಆ ಪುಮೊರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ರ‍್ಯಾಂಟ್,
ಸೂ॥ ರೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡ್ರ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ರ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವೆರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ರ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಛೇನ್ಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರೆ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಛೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡುವಾರದು.

ಹೆಚ್. ಹಡ್ಸ್ಸ್,
ಕಾಂಪ್ಟ್ರೋಲರ್.

ರಿಜಿಸ್ಟ್ರೇಷ್ಯನ್ ಇಲಾಖಾ.

ಸಬ್ ರೆಜಿಸ್ಟ್ರಾರ್ರು ಗುಮಾಸ್ತೇರುಗಳಿಗೆ ರುಸುಂ.

1883—84ನೇ ಇಸವಿ ಸರಕ್ಯುಲರ್ ನಂಬರ್ 6.

ಮೈಸೂರು ದೇಶದ ಸಬ್ ರೆಜಿಸ್ಟ್ರಾರ್ ಆಫೀಸುಗಳ ಗುಮಾಸ್ತೇರ ರುಸುಂಗಳ ವಿಷಯದಲ್ಲಿ ಕೊಡೋಣಾದ ಈ ಆಫೀಸು 1880ನೇ ಇಸವಿ ಸೆಪ್ಟಂಬರ್ 15ನೇ ಮರ್ಕುಂ 10ನೇ ನಂಬರ್ ಸರ್‌ಕಿಲರ್ ವಿಷಯದಲ್ಲಿ ಇನ್‌ಸ್ಪೆಕ್ಟರ್ ಜನರಲ್‌ಯವರು, ದೀವಾನರ ಮಂಜೂರಾತಿಯನ್ನು ಪಡೆದು ಇದರಡಿ ಬರುವ ಬದಲಾವಣೆಗಳನ್ನು ಪ್ರಕಟ ಪಡಿಸುತ್ತಾ ರಾಗಿ ಸಬ್ ರಿಜಿಸ್ಟ್ರಾರಿಗೆ ಪಾವತೀ ಮಾಡಲ್ಪಡುವ ಶೇಕಡಾ 40ರ ಕಮ್ಮಿಷ್ಟ್ರ್ಯ ಪೈಕೀ, ಕೆಲವು ಸಬ್ ರೆಜಿಸ್ಟ್ರಿ ಆಫೀಸುಗಳ ಗುಮಾಸ್ತೇರುಗಳಿಗೆ 1884ನೇ ಇಸವಿ ಏಪ್ರೆಲ್ 1ನೇ ಮರ್ಕುಂ ಲಾಗಾಯತು ಅಪ್ರಕಾರ ರುಸುಂಗಳು ಪಾವತೀ ಮಾಡಲ್ಪಡತಕ್ಕದ್ದು.

2. ಇತರ ಆಫೀಸುಗಳ ರುಸುಂ ಹಾಲಿ ಯಿರುವಂತೆಯೆ ಯಿರತಕ್ಕದ್ದು.

ಡಿಸ್ಟ್ರಿಕ್ಟ್ ವ ಸಬ ಡಿಸ್ಟ್ರಿಕ್ಟ್‌ಗಳು.		1882–83ನೇ ಇಸವಿಯಲ್ಲಿ ಸಬ ರಜಿಸ್ಟ್ರಾರಿಗೆ ಕೆ॥ 40ರ ಪ್ರಕಾರ ಪಾವತೀಯಾದ ಮಾಹೆಯಾನಾ ಸರಾಸರಿ ಮೊಬಲಗು.	ಹಾಲೀ ಸಲ್ಲತಕ್ಕ ಮಾಹೆಯ ನಾ ರುಸುಂ	ಐಯಿಂದ ಕೊಡ(ಕಾ)ವ ರುಸುಂ.
		ರೂಪಾಯಿ.	ರೂಪಾಯಿ	ರೂಪಾಯಿ.
ಬೆಂಗಳೂರು	ವ್ಹೈಟ್‌ಫೀಲ್ಡ್	12	ಗೊತ್ತಿಲ್ಲಾ	10
	ಕುಣಿಗಲ್	13	ಡಿಟೋ	10
	ದೊಡ್ಡಬಳ್ಳಾಪುರ	12	ಡಿಟೋ	10
ಮೈಸೂರು	ಚಾಮರಾಜನಗರ	31	10	15
	ನಂಜನಗೂಡು	22	10	15
	ಯಳಂದೂರು	22	10	15
	ಹುಣಸೂರು	18	ಗೊತ್ತಿಲ್ಲಾ	12
ತುಮಕೂರು	ತಿಪಟೂರು	21	10	15
	ತುಮಕೂರು	16	10	12
	ಗುಬ್ಬಿ	11	ಗೊತ್ತಿಲ್ಲಾ	10
ಕಡೂರು	ಚಿಕ್ಕಮಗಳೂರು.	41	20ರ ಇಸಂ1–10ರ ಇಸಂ1	20
	ಮೂಡಗೆರೆ	13	ಗೊತ್ತಿಲ್ಲಾ	10
ಹಾಸನ	ಮಂಜೆರಾಬಾದು.	14	ಡಿಟೋ	10.

ಹೆಚ್. ಹಡಸರ್,

ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್.

ನಂದೀದುರ್ಗ ಡಿವೀಜನ್

ನಂದೀದುರ್ಗ ಡಿವೀಜನ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

ಈದರಂಣನ ಮಗ ದೊಡ್ಡನರಸುಪ್ಪನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ವ್ಯಾಜ್ಯದ ನಂಬರಿ 78.

ಹುಕ್ಕುಂ.

ಮೇಲ್ಕಂಡ ದೊಡ್ಡನರಸುಪ್ಪನು ಖುಲಾಸೇಯಾಗಬೇಕೆಂದು ಕೋರಿ ಸರದುಕೊಂಡ ಅರ್ಜೀಯು ಟಿ. ಆರ್. ಯೆ. ತಂಬುಚೆಟ್ಟಿಯಾರ್, ಡಿಸ್ಟ್ರಿಕ್ಟ್ ಜಡ್ಜ್‌ಯವರ ರೂಬರೂ ಅರ್ಜೀದಾರನ ಪರವಾಗಿ ಯಿವನ ಸಮಕ್ಷಮದಲ್ಲಿಯೂ ಮತ್ತು ಐಜ್ ಅರ್ಜೀದಾರನ ಲೇಣೇದಾರರಾದ ವೆಂಕಟಸಾಮಿ ವಗೈರೇರ ಗೈರ್ ಹಾಜರ್, ದರ್ಯಾಫ್ತೀ ಮಾಡಲ್ಪಟ್ಟತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಆ ಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ– 1ನೇ ವೆಂಕಟಸಾಮಿ, 2ನೇ ದೊಡ್ಡವೀರಭದ್ರಂಣ, 3ನೇ ಚಿಕ್ಕವೀರಭದ್ರಂಣ, 4ನೇ ಬೈರಂಣ, 5ನೇ ನಾರಣಯ್ಯರ್, 6ನೇ ಅದಾಲತ್ತು ಬ್ಯಾಂಕ, 7ನೇ ಪುಟ್ಟಂಣ, 8ನೇ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ, 9ನೇ ಗಿಡ್ಡಂಣ, 10ನೇ ಲಕ್ಷ್ಮೀನಾರಣಪ್ಪ

ಸದರೀ ದೊಡ್ಡನರಸುಪ್ಪನು ದಿವಾಳೀಯಾದವನೆಂದನ್ನು ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು, ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ವರ್ತೇದಾರು, ಇನ್ನು ಮುಂದೆ ನಮೂದಾದಂತೆ ಐಜ್ ದಿವಾಳೀಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ರ್ಮಾಡಲ್ಪಡತಕ್ಕದೆಂದನ್ನು ಸದರೀ ರಿಸೀವರಾದವನು ಸದರೀ ದಿವಾಳೀಯಾದವನ ಜಿಂದಗಿಗೆ ಜವಾಬೆ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ್ ಕೆಲಸಗಳಿಗೆ